ಆಗಿರುವುದಿಲ್ಲ. ಈ ವಿಷಯವನ್ನು ನಾನು ಕಳೆದ ೩ ಬಾರಿ ಬಜೆಟ್ ಅಧಿವೇಶನಗಳ ಸಮಯದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತಂದಾಗ ೩ ಬಾರಿಯೂ ಸಹ ಈ ರಸ್ತೆಗಳನ್ನು ವಿಶೇಷ ಆದ್ಯತೆಯ ಮೇಲೆ ಈ ವರ್ಷವೇ ತಾರು ಹಾಕಿಸಿ ಕೊಡುವುದಾಗಿ ಭರವಸೆ ನೀಡಿದ್ದರು. ಆದರೆ ಈವರೆಗೆ ತಾರು ಹಾಕಿಸಲಿಲ್ಲ. ಆ ರಸ್ತೆಗಳು ತಾರು ಕಾಣಬಹುದೆಂಬ ನನ್ನ ಆಸೆ ದಿನೇ ದಿನೇ ಕಡಿಮೆಯಾಗುತ್ತಿದೆ. ಆದುದರಿಂದ ಈ ವರ್ಷವೇ ಆ ರಸ್ತೆಗಳ ಉಳಿದ ಭಾಗಗಳಿಗೆ ತಾರನ್ನು ಹಾಕಿಸಿ ಧೂಳನ್ನು ತಿನ್ನುತ್ತಿರುವ ಜನರ ಮನಸ್ಸಿಗೆ ನೆಮ್ಮದಿ ತರಬೇಕೆಂದು ಮಾನ್ಯ ಸಚಿವರನ್ನು ನಿಮ್ಮ ಮೂಲಕ ಒತ್ತಾಯಿಸಂತ್ತೇನೆ.

ಶ್ರೀ ಎಂ ರಘುಪತಿ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಗಮನಕ್ಕೆ ತಂದ ವಿಚಾರವನ್ನು ಲೋಕೋಪಯೋಗಿ ಸಚಿವರಿಗೆ ತಿಳಿಸಿ ಉತ್ತರವನ್ನು ತರಿಸಿಕೊಡುತ್ತೇನೆ.

೫. ಜಮಖಿಂಡಿ ತಾಲ್ಲೂಕಿನ ಚಿಕ್ಕಪಡಸಲಗಿ ವಡ್ಡು ಕಟ್ಟುವ ಕೆಲಸದ ಬಗ್ಗೆ

ಶ್ರೀ ಬಿ, ಎಸ್. ಯಮೂಡಿಯೂರಪ್ಪ.—ಜಿಜಾಪುರ ಜಿಲ್ಲೆ ಜಮಖಿಂಡಿ ತಾಲ್ಲೂಕಿನ ''ಚಿಕ್ಕಪಡಸಲಗಿ'' ಗ್ರಾಮದ ಮತ್ತು ಇತರೆ ಗ್ರಾಮದ ಜೃತರೈತರಿಂದ ೪೦ ಲಕ್ಷ ಸಂಗ್ರಹ ಮಾಡಿ ಮತ್ತು ಬ್ಯಾಂಕಿನಿಂದ ರೈತರು ೨೦ ಲಕ್ಷ ಸಾಲ ಮಾಡಿ ''ಚಿಕ್ಕಪಡಸಲಗಿ ವಡ್ಡು'' ಕಟ್ಟುವ ಕೆಲಸ ಸಂಪೂರ್ಣ ಒಂದು ಕೋಟಿ ಅಂದಾಜಿನಲ್ಲಿ ಸರ್ಕಾರದ ಅನುಮತಿ ಪಡೆದು ಈಗಾಗಲೆ ೨೦ ಲಕ್ಷ ಖರ್ಚು ಮಾಡಿ ಕೆಲಸ ಪ್ರಾರಂಭಿಸಿದ್ದಾರೆ.

ಈ ವಡ್ಡು ಕಟ್ಟುವುದರಿಂದ ಸುತ್ತಮುತ್ತಲ ಅನೇಕ ಗ್ರಾಮಗಳಿಗೆ ಕುಡಿಯುವ ನೀರಿನ ಅನುಕೂಲವಾಗುವುದರಿಂದ—ಸರ್ಕಾರ ಕೊನೆಯ ಪಕ್ಷ ರೈತರ ಪರಿಸ್ಥಿತಿ ಅರಿತುಕೊಂಡು, ಈ ವಡ್ಡಿನ ಕೆಲಸ ಪೂರ್ಣಮಾಡಲು ೨೫ ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕೆಂಬ ವಿಷಯದ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ. - ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಮಂತ್ರಿಯವರಿಂದ ನಾಳೆ ಉತ್ತರವನ್ನು ತರಿಸಿಕೊಡುತ್ತೇನೆ.

೬. ಗುಲ್ಬರ್ಗ ಜಿಲ್ಲೆಯಲ್ಲಿ ನೀರಿನ ಅಭಾವ ಜಾಸ್ತಿಯಾಗುತ್ತಿರುವುದು

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಗುಲ್ಬರ್ಗ ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಬಿಸಿಲಿನಿಂದ ಅನೇಕ ಗ್ರಾಮಗಳಲ್ಲಿ ನೀರಿನ ಅಭಾವ ಹೆಚ್ಚಾಗುತ್ತಿದ್ದು, ಅಲ್ಲಿಯ ಜಿಲ್ಲಾಪರಿಷತ್ ಇಂಜಿನೀಯರ್‌ಗಳಿಗೆ ಪಿ.ಎಚ್.ಇ. ಕೆಲಸಗಳನ್ನು ವಹಿಸಿಕೊಂಡಿದ್ದು, ನಮ್ಮ ಕ್ಷೇತ್ರದ ಇಂಜಿನೀಯರುಗಳು ಸರಿಯಾಗಿ ಕಾಳಜಿ ವಹಿಸದೆ, ಕೆಲಸಗಳಲ್ಲಿ ವಿಳಂಬ ಮಾಡುತ್ತಿರುವುದರಿಂದ, ಗ್ರಾಮಗಳಲ್ಲಿನ ನೀರಿನ ಪರಿಸ್ಥಿತಿ ಹಾನಿಗುಂಟಾಗಿದೆ. ಈ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯವರಿಗೆ ಹಲವಾರು ಬಾರಿ ಮಂಡಲ ಪಂಚಾಯತಿ ಪ್ರಧಾನರು ಮತ್ತು ತಾಲ್ಲೂಕು ಸಮಿತಿಯಿಂದ ಪಿರ್ಯಾದು ಕೊಟ್ಟರೂ, ಇವರಿಗೆ ಯಾರ ಭಯವೂ ಇಲ್ಲ. ತಾವು ಕೂಡಲೇ ಈ ಇಂಜನೀಯರ್‌ಗಳ ಮೇಲೆ ಕ್ರಮ ತೆಗೆದುಕೊಂಡು ಈ ಸಮಸ್ಯೆಗೆ. ಉಡಾಗಿರುವ, ಆತನೂರು, ನೀಲೂರು, ತೆಲ್ಲೂರು, ಸಾಗನೂರು, ಬೈರಾಮದಗಿ, ದೇವಲಗಾಣಗಾಪೂರ್, ಮೇಳಕುಂಡಾ, ಬಿ. ಸಾವಳಗಿ, ರೈಲ್ವೆಸ್ಟೇಶನ್ ಗ್ರಾಮಗಳ ನೀರಿನ ಅನುಕೂಲ ಆದಷ್ಟು ಬೇಗ ಮಾಡಿಸಿಕೊಡಲು ಸರ್ಕಾರ ಕಾಳಜಿ ವಹಿಸಬೇಕಾಗಿ ಈ ಮೂಲಕ ತಿಳಿಯ ಪಡಿಸಂತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ೩೫ ಜನ ಮಂತ್ರಿಗಳಿದ್ದಾರೆ ಇಲ್ಲಿ ನಾಲ್ಕು ಜನ ಮಂತ್ರಿಗಳಿದ್ದಾರೆ. ನಾವು ಏನು ಕೇಳಿದರೂ ಕೂಡ ಉತ್ತರ ತರಿಸಿಕೊಡುತ್ತೇನೆಂದು ಹೇಳುತ್ತಾರೆ. ಈ ರೀತಿ ಮಾಡುವುದಾದರೆ ನಾವು ಏಕೆ ಕೇಳಬೇಕು. ನಾವು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕ. ಸಾಧ್ಯವಾದಷ್ಟು ಅದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ನಾವು